



ಶ್ರೀ. ಪ.ವಿ.ವ.ಸಂ.ಸಾ

# ಜಿ.ಪಿ.ಪೋರವಾಲ ಕಲಾ, ವಾಣಿಜ್ಯ ಮತ್ತು ವ್ಹಿ.ವ್ಹಿ. ಸಾಲಿಮಠ ವಿಜ್ಞಾನ ಮಹಾವಿದ್ಯಾಲಯ

ಸಿಂದಗಿ - 586128

೨೦೨೨-೨೦೨೩

09/10

ತಾ॥ಸಿಂದಗಿ ಜಿಲ್ಲಾ॥ವಿಜಯಪುರ

## ಕನ್ನಡ ವಿಭಾಗ

## ವಿದ್ಯಾರ್ಥಿಯ ಪ್ರಾಯೋಜಿತ ಕಾರ್ಯ

## ಕರ್ನಾಟಕದ ಪ್ರಮುಖ ಕನ್ನಡ ಶಾಸನಗಳು

ಮಾರ್ಗದರ್ಶಕರು
ಪ್ರೊ – ಪ್ರತಿಕಾ. ಎಮ್. ತಳವಾರ (ಎಂ.ಎ, ಎಂ.ಎಡ್)

ಇವರಿಂದ,
ನಿಂಗಮ್ಮ ಆರ್. ಬಿರಾದಾರ
ಐಚ್ಛಿಕ ಕನ್ನಡ
B.A.I sem
Reg no.: U15NB22A0181
ವಸ್ತಿಗ್ರಾಮ : ಸಿಂದಗಿ
ತಾ॥ ಸಿಂದಗಿ ಜಿ॥ ವಿಜಯಪುರ

Co-ordinator IQAC
G. P. Porwal Arts, Comm. & V. V. Salimath Science College, SINDGI-586128. Dt-Vijayapur

Principal,
G. P. Porwal Arts, Comm &
V. V. Salimath Sc. College
SINDGI-586128. College Code: 52



S.P.V.V.S.S



G.P.PORWAL ARTS, COMMERCE & V.V. SALIMATH SCIENCE COLLEGE

SINDAGI - 586128

2022-2023

Tq :Sindagi Dist :Vijayapur

# Dept, of Kannada

## Student Project Works on

## Karantakada Pramuka Kannada Shasanagalu

**Guided By,**

*Prof - Pratika M. Talawar ( M.A. M.Ed )*

**Submitted By,**

*Ningamma R.Biradar*
*B.A. I sem*
*Reg No : U15NB22A0181*
*Tq : Sindagi Dist : Vijayapura*

# ಕರ್ನಾಟಕದ ಪ್ರಮುಖ ಕನ್ನಡ ಶಾಸನಗಳು.

## ಪರಿವಿಡಿ


| ಪರಿವಿಡಿ | ಪುಟ ಸಂಖ್ಯೆ. |
| --- | --- |
| * ಶಾಸನ ಸಾಹಿತ್ಯ | |
| 1) ಶಾಸನ ಪದದ ಅರ್ಥ ಮತ್ತು ಉತ್ಪತ್ತಿ. | ೧ - ೨ |
| 2) ಶಾಸನಾಧ್ಯಯನ ಉಗಮ - ವಿಕಾಸ | ೨ - ೪ |
| * ಶಾಸನಗಳ ಪ್ರಕಾರಗಳು. | |
| 1) ದಾನ ಶಾಸನ | ೬ |
| 2) ವೀರಗಲ್ಲು ಶಾಸನ | ೭ |
| 3) ಮಾಸ್ತಿಕಲ್ಲು ಶಾಸನ | ೮ |
| 4) ನಿಷಿಧಿ ಕಲ್ಲು ಶಾಸನ | ೮ |
| * ಕರ್ನಾಟಕದ ಪ್ರಮುಖ ಕನ್ನಡ ಶಾಸನಗಳು. | |
| 1) ಹಲ್ಮಿಡಿ ಶಾಸನ | ೧೦-೧೯ |
| 2) ಬಾದಾಮಿ ಶಾಸನ | ೨೦ - ೨೧ |
| 3) ಶ್ರವಣಬೆಳಗೊಳ ಶಾಸನ | ೨೧ - ೨೨ |
| 4) ಗಂಗಾಧರ ಶಾಸನ | ೨೩-೨೪ |
| 5) ಅರ್ಜುನವಾಡ ಶಾಸನ | ೨೪ |
| 6) ಕುಮರಲಕ್ಷ್ಮಾ ಶಾಸನ | ೨೫ |
| 7) ಬುಕ್ಕರಾಯನ ಶ್ರವಣ ಬೆಳಗೊಳ ಶಾಸನ | ೨೫ |
| 8) ಆತಕೂರ ಶಾಸನ | ೨೬ |
| 9) ಐಹೊಳೆ ಶಾಸನ | ೨೭ |
| 10) ಕಪ್ರುಹಳ್ಳಿ ಶಾಸನ. | ೨೮ |
| * ಉಪಸಂಹಾರ. | |



Principal,
G. P. Porwal Arts, Comm &
V. V. Salimath Sc. College
SINDGI-586128, College Code: 5234

# ಶಾಸನ ಸಾಹಿತ್ಯ

ಪೀಠಿಕೆ:

ಕನ್ನಡ ಸಾಹಿತ್ಯ ಚರಿತ್ರೆಯಂಬುವುದು ಸುದೀರ್ಘ ಸಂಚಲನ ಪ್ರಕ್ರಿಯೆ. ಒಂದು ನಂತರ ಒಂದು ಬಗೆಯ ಸಾಹಿತ್ಯ ಸ್ವರೂಪಗಳು ಈ ನೆಲದಲ್ಲಿ ಹುಟ್ಟಿ ಬೆಳೆದಿವೆ. ಈ ಸಾಹಿತ್ಯ ಪರಂಪರೆ ಆರಂಭವಾಗುವುದರಲ್ಲಿ ಮುಂಚೆ ಕಾಣಿಸಿಕೊಂಡ ಶಾಸನ ಸಾಹಿತ್ಯ ಕನ್ನಡ ನಾಡಿನ ಜನರ ಆಚಾರ-ವಿಚಾರಗಳನ್ನು, ಸಿದ್ಧಿ-ಸಾಧನೆಗಳನ್ನು ಸಾರಿ ಹೇಳುವ ಸಾಹಿತ್ಯಕ ನೆಲೆಯಾಯಿತು. ಅಂದಿನ ಕಾಲದ ಸಾಮಾಜಿಕ ಜೀವನ, ರಾಜಕೀಯ ವ್ಯವಸ್ಥೆ, ಧಾರ್ಮಿಕ ಕಲ್ಪನೆ, ವ್ಯಾಪಾರ-ವ್ಯವಹಾರಗಳ ವಿಚಾರ ಮುಂತಾದ ಅಂಶಗಳು ಶಾಸನಗಳಿಂದ ತಿಳಿದು ಬರುತ್ತವೆ. ಶಾಸನಗಳು ಒಂದೆಡೆ ಮಾಹಿತಿಯ ಆಕರ-ಪರಿಕರಗಳಾದರೆ ಮತ್ತೊಂದೆಡೆ ಸಾಹಿತ್ಯದಿಂದ ಸಮೃದ್ಧವಾಗಿವೆ. ಕನ್ನಡ ನುಡಿಯಾಗಿ ನಾಡಿಯುಕ್ತವಾಗಿವೆ. ನಮ್ಮ ಅಧ್ಯಯನಕ್ಕೆ ಸಾಹಿತ್ಯಕ ಪರಿಕರ ಸಾಧನವಾಗಿ ಸಹಕಾರವನ್ನು ನೀಡಿವೆ.

## * ಶಾಸನ ಪದದ ಅರ್ಥ

ಶಾಸನವೆಂದರೆ 'ರಾಜಾಜ್ಞೆ' ಎಂದರ್ಥ. ರಾಜನು ತಾನು ಕೊಟ್ಟ ದಾನದ ಬಗೆಯನ್ನಾಗಲೀ ಧರ್ಮ ಕಾರ್ಯದ ಬಗೆಯನ್ನಾಗಲೀ ಹೊರಡಿಸಿದ ಆಜ್ಞೆಯನ್ನು ಶಾಸನ ಎನ್ನುತ್ತಿದ್ದರು. ತಾನು ಕೊಟ್ಟ ದಾನ ಶಾಶ್ವತ ಜನಕ್ಕೆ ಉಳಿಯಲಿ ಸೂರ್ಯ-ಚಂದ್ರರಿರುವವರೆಗೆ ತನ್ನ ಹೆಸರು ಶಾಶ್ವತ ಉಳಿಯಲಿ ಎನ್ನುವ ಕಾರಣಕ್ಕೆ ಪ್ರಚಾರ ಸಾಧನಗಳಿಲ್ಲದಿರುವಾಗ ಶಾಸನಗಳು ಆ ಸ್ಥಾನ ಪಡೆದಿವೆ.

## * ಪದದ ಉತ್ಪತ್ತಿ

ಸಂಸ್ಕೃತದ ಮೂಲ ಪದದಿಂದ ಬಂದಿದೆ. ಶಾಸ್ ಎಂಬ ಧಾತುವಿನಿಂದ ಬಂದಿದೆ.

ಶಾಸ್ = ಆಜ್ಞಾಪಿಸು, ಶಿಕ್ಷಿಸು, ನಿಯಂತ್ರಿಸು ಎಂಬ ಅರ್ಥಗಳನ್ನು ನೀಡುತ್ತದೆ.

ಇಂಗ್ಲಿಷಿನಲ್ಲಿ ಇದಕ್ಕೆ Inscription ಎಂಬ ಹೆಸರಿದೆ. ಇದರ ಅರ್ಥ ಕೆತ್ತಿದ್ದು, ಕೊರೆದದ್ದು ಬರೆದದ್ದು ಎಂಬ ಅರ್ಥಗಳು. Inscribe ಎಂದರೆ ಅಕ್ಷರಗಳನ್ನು ಕೆತ್ತುವುದು ಎಂದರ್ಥ. ಅಶೋಕನ ಕಾಲಕ್ಕೆ ಇದಕ್ಕೆ 'ಧಮ್ಮಲಿಪಿ' ಎಂಬ ಹೆಸರಿತ್ತು

* ಶಾಸನಗಳ ಕೆತ್ತನೆ.

ಸಾಮಾನ್ಯವಾಗಿ ನಾಣ್ಯಗಳಂತಹ ತಾಳೆಗರಿ ಭೂರ್ಜಪತ್ರ, ಕಾಗದ ಮೊದಲಾದವುಗಳ ಮೇಲಿನ ಬರಹಗಳನ್ನು ಬಿಟ್ಟು ಬಹು ಕಾಲ ಬಾಳುವಂತಹ ಶಿಲೆ, ಲೋಹಗಳ ಮೇಲಿನ ಬರಹಗಳನ್ನು ಶಾಸನಗಳೆಂದು ಕರೆಯುತ್ತಾರೆ.

## * ಶಾಸನಾಧ್ಯಯನ ಉಗಮ - ವಿಕಾಸ

ಶಾಸನಗಳ ಬರವಣಿಗೆ ಮೊತ್ತಮೊ-ದಲು ಕಾಣಿಸಿಕೊಂಡಿತು ಈಜಿಪ್ಟಿನಲ್ಲಿ → ಅಲ್ಲಿ ಮರದ ಮೇ-ಲೆ ಬರೆದಿರುವುದು ಶಾಸನ.

* ಚೀನಾದಲ್ಲಿ → ಮೂಳೆಗಳ ಮೇಲೆ ಬರೆದಿರುವ ಶಾಸನ
* ಮೆಸೊಪೊಟೋಮಿಯಾದಲ್ಲಿ → ಮಡಿಕೆ ಮೇಲೆ ಮುದ್ರಿಸಿದ ಶಾಸನಗಳು ಸಿಕ್ಕಿವೆ.
* ಈಜಿಪ್ಟಿನಲ್ಲಿ → ಮರದ ಮೇಲೆ ಬರೆದಿರುವ ಶಾಸನ ದೊರೆತಿವೆ.
* ಭಾರತದಲ್ಲಿ → ಸಿಂಧೂ ಕೊಳ್ಳದ ಸಂಸ್ಕೃತಿಗೆ ಸಂಬಂಧಿಸಿದ ಅಂದರೆ ಸಿಂಧೂನಾಗರಿಕತೆಯ ಮುದ್ರೆಗಳು ಸಿಕ್ಕಿವೆ.

ಭಾರತದಲ್ಲಿ ಸಿಂಧೂ ಕೊಳ್ಳದ ಸಂಸ್ಕೃತಿಯಲ್ಲಿ ಅಂದರೆ ಸಿಂಧೂ ನಾಗರಿಕತೆಯಲ್ಲಿ ಕೂಡ ಮುದ್ರೆ ಸಿಕ್ಕಿವೆ. ಇವುಗಳ ಮೇಲಿರುವ ಲಿಪಿಗಳು ಲಿಪಿಗಳ ಬಗ್ಗೆ ಭಿನ್ನಾಭಿ-ಪ್ರಾಯವಿರುವ ಕಾರಣ ಅಶೋಕನ ಶಾಸನಗಳೆ ಭಾರತದ ಅತಿ ಪ್ರಾಚೀನ ಶಾಸನಗಳೆಂದು ಪರಿಗಣಿಸಲಾಗಿದೆ.

ತಾಮ್ರ ಪಟ ಹಾಗೂ ಬಂಡೆಗಳ ಮೇಲೆ ಅಶೋಕನಿಗೆ (ಶಾಸನಗಳ ಬಗ್ಗೆ) ಶಾಸನಗಳು ಮೇಲೆ ಕೆತ್ತಲು ಪ್ರೇರಣೆ ನೀಡಿದವರು ಪ್ರೇರಕ → ಇರಾನಿನ ಅಖಾಮೆನಿಯನ ರಾಜ ಶಾಸನಗಳು ಪ್ರೇರಣೆಯನ್ನು ನೀಡಿರಬಹುದು. ಅವು ಪ್ರಾಕೃತ ಭಾಷೆಯಲ್ಲಿರುವುದನ್ನು ಗಮನಿಸಿದರೆ ಅಂದು ಪ್ರಾಕೃತ ಭಾಷೆಯು ರಾಜಭಾಷೆಯಾಗಿತ್ತೆಂ-ಬುದು ತಿಳಿದು ಬರುತ್ತದೆ.

ಕಾಲಾಂತರದಲ್ಲಿ ಅಂದರೆ ಕ್ರಿ.ಶ. ೧ನೇ ಶತಮಾ-ನದ ಅಂತ್ಯದ ವೇಳೆಗೆ ಸಂಸ್ಕೃತ ಪ್ರಭಾವ ಭಾಷೆಯಾಗಿ ರಾಜ ಯೋಗವ ಪಡೆಯಿತು. ಆಗ ಕಾವ್ಯ ಪಾಂಡಿತ್ಯವು ಶಾಸನಗಳಲ್ಲಿ ಶೋಭಿಸಲಾರಂಭಿಸಿತು.

ಅಂದು ಪ್ರಾಕೃತ ಭಾಷೆಯು ಬಳ್ಳಾರಿಯಲ್ಲಿ ಅಂದರೆ ಕ್ರಿ.ಶ. ೧ ನೇ ಶತಮಾನದ ಅಂತ್ಯದ ವೇಳೆಗೆ ಸಂಸ್ಕೃತ ಭಾಷೆಯನ್ನು ಬಳಸಿಕೊಂ-ಡು ಶಾಸನ ಬರೆದರು. ಅಲ್ಲದೆ ಶಾಸನಗಳನ್ನು ಬಳಸಿಕೊಂಡರು.

ಕರ್ನಾಟಕದಲ್ಲಿ ಅಶೋಕನ ಶಾಸನಗಳು

→ ① ಬ್ರಹ್ಮಗಿರಿ, ② ಜಟಿಂಗರಾಮೇಶ್ವರ, ③ ಮಸ್ಕಿ ④ ಸಿದ್ದಾಪುರ ⑤ ಪಾಲ್ಕಿಗುಂಡ ⑥ ಉದೆಗೊಳಂ.

ಅಲ್ಲದೆ ನಿಟ್ಟೂರು ಶಾಸನವಿದೆ

* ಅಶೋಕ ತಾನು ಬರೆದ ಶಾಸನ ಬ್ರಾಹ್ಮಿ, ಪ್ರಾಕೃತ್, ಭಾಷೆಯ – ಲಿಪಿ.

* 19 ನೇ ಶತಮಾನದವರೆಗೂ ಅಶೋಕನ ಶಾಸನಗಳು ಸಿಕ್ಕಿದರೂ ಅವುಗಳನ್ನು ಓದಲಾಗಿರಲಿಲ್ಲ

* ಕ್ರಿ.ಶ ೧೮೩೭ - ೩೮ ರಲ್ಲಿ ಅಶೋಕನ ಶಾಸನಗಳು ಬ್ರಾಹ್ಮಿಲಿಪಿ ಶಾಸನವನ್ನು ಸಮರ್ಪಕವಾಗಿ ಓದಿದವರು => ಜೇಮ್ಸ್ ಪ್ರಿನ್ಸೆಪ್.

* ಅಜ್ಮೀರದ ಶಿಲೆಗಳಲ್ಲಿ ಎರಡು ಅಜ್ಞಾತ ನಾಟಕಗಳ ಖಂಡಗಳು ಸಿಕ್ಕಿವೆ. ಇವುಗಳಲ್ಲೊಂದು ಸೋಮದೇವನಿಂದ ರಚಿತವಾದ ಲಲಿತ ವಿಗ್ರಹರಾಜ ನಾಟಕ

* ಇದರಂತೆ ಮಧ್ಯಭಾರತದ ಧಾರ್ ಶಿಲೆಯಲ್ಲಿ ಮದನ ಕವಿ ವಿರಚಿತ "ಪಾರಿಜಾತ ಮಂಜರಿ" ನಾಟಕದ ಎರಡು (ಅಂಕಗಳು) ಭಾಗಗಳು ಸಿಕ್ಕಿವೆ

* ಈ ಶಿಲೆಯಲ್ಲಿ ಭೋಜರಾಜನ ಗೌರವಾರ್ಥವಾಗಿ ರಚಿತವಾದ ಎರಡು ಪ್ರಾಕೃತ ಕಾವ್ಯಗಳಲ್ಲಿ ವಿಷ್ಣುವಿನ ಕೂರ್ಮಾವತಾರವನ್ನು ವರ್ಣಿಸಲಾಗಿದೆ.

* ಮದ್ರಾಸಿನ ಪುದುಕೋಟೆಯ ಸಮೀಪದಲ್ಲಿರುವಂತಹ ಸ್ಥಳ "ಕುಡಿಮಿಯಾಮಲೈ" ಎಂಬ ಬೆಟ್ಟದ ಮೇಲಿನ ಒಂದು ಶಿಲಾ ಶಾಸನ ದೊರಕಿದೆ ಅದರ ಬಗ್ಗೆ ತಿಳಿದಿಲ್ಲ

* ಶ್ರೀಲಂಕಾದಲ್ಲಿ ಸ್ವರ ಪ್ರಸ್ತಾರವಿರುವ ಸಂಗೀತದ ಶಾಸನವಾದ ಪ್ರಕೃತಿ ಶಾಸನವಾಗಿದೆ.

# ಶಾಸನಗಳ ಪ್ರಕಾರಗಳು

ಶಿಲೆಗಳ ಮೇಲೆ, ತಾಮ್ರಪಟಗಳ ಮೇಲೆ, ವಿಗ್ರಹ ಪೀಠಗಳ ಮೇಲೆ, ಘಂಟೆಗಳ ಮೇಲೆ ಇರುವ ಬರಹಗಳೆಲ್ಲವೂ ಶಾಸನಗಳಾದರೂ ಅಧ್ಯಯನದ ಅನುಕೂಲಕ್ಕಾಗಿ ಈ ಕೆಳಗಿನ ಗುಂಪುಗಳಲ್ಲಿ ಶಾಸನಗಳನ್ನು ವಿಂಗಡಿಸಿದೆ

೧. ಯುದ್ಧ ಶಾಸನಗಳು
೨. ಬಂಡೆಗಲ್ಲು ಶಾಸನಗಳು
೩. ಸ್ತಂಭ ಶಾಸನಗಳು
೪. ಪ್ರಶಸ್ತಿ ಶಾಸನಗಳು
೫. ದಾನ ಶಾಸನಗಳು
೬. ವಿಜಯ ಶಾಸನಗಳು
೭. ಧರ್ಮ ಶಾಸನಗಳು
೮. ಅಭಯ ಶಾಸನಗಳು
೯. ವೀರಗಲ್ಲು ಶಾಸನಗಳು
೧೦. ಮಾಸ್ತಿ ಶಾಸನಗಳು
೧೧. ನಿಷಧಿ ಶಾಸನಗಳು

ಶಾಸನಗಳನ್ನು ಅಧ್ಯಯನ ದೃಷ್ಟಿಯಿಂದ ದಾನ ಶಾಸನಗಳು 'ವೀರಗಲ್ಲು' ಮಾಸ್ತಿಕಲ್ಲು ಮತ್ತು ನಿಷಧಿಕಲ್ಲು ಎಂದು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ.

# ೧. ದಾನ ಶಾಸನಗಳು

ವ್ಯಕ್ತಿಗೆ ಮತ್ತು ಸಂಸ್ಥೆಗೆ ಕೊಟ್ಟ ದಾನವನ್ನು ದಾನಗಳಲ್ಲಿ ವೀರತ್ವ ಮತ್ತು ಭಕ್ತಿ ತುಂಬಾ ಮುಖ್ಯ. ವೀರನ ಪರಾಕ್ರಮವನ್ನು ಮೆಚ್ಚಿ ಮತ್ತು ವ್ಯಕ್ತಿಯ ಭಕ್ತಿಯನ್ನು ಮೆಚ್ಚಿ ಈ ದಾನಗಳನ್ನು ಕೊಡಲಾಗುತ್ತಿತ್ತು. ಸಂಸ್ಥೆಗೆ ಕೊಟ್ಟ ದಾನ ದೇವಾಲಯಕ್ಕೆ, ಮಠಕ್ಕೆ ಮಹಾಜನಗಳಿಗೆ ಬಿಟ್ಟ ದತ್ತಿಯಾಗಿರಬಹುದು. ದೇವರ ಅಂಗ ಭೋಗಕ್ಕೆ, ರಂಗ ಭೋಗಕ್ಕೆ, ತ್ರಿಕಾಲ ನೈವೇದ್ಯಕ್ಕೆ ಬಿಟ್ಟ ದತ್ತಿ ಅಥವಾ ದೇವಾಲಯದ ಅರ್ಚಕರಿಗೆ, ಊಳಿಗದವರಿಗೆ ದೇವದಾಸಿಯರಿಗೆ, ಛತ್ರಕ್ಕೆ ಬಿಟ್ಟ ದಾನ. ಇವೆಲ್ಲ ದೇವಾಲಯಕ್ಕೆ ಬಿಟ್ಟ ದಾನದ ಗುಂಪಿನಲ್ಲೇ ಬರುತ್ತವೆ. ದಾನ ಶಾಸನಗಳನ್ನು ಅರಸನ ಸಮಕ್ಷಮದಲ್ಲಿ ಅಥವಾ ಅವನ ಅಪ್ಪಣೆ ಪಡೆದ ಅವನ ಪ್ರತಿನಿಧಿಯ ಸಮಕ್ಷಮದಲ್ಲಿ ಕೊರೆಯಿಸಲಾಗುತ್ತಿತ್ತು ದಾನ ಶಾಸನಗಳು ಸಾಮಾನ್ಯವಾಗಿ ತಾಮ್ರಪಟ ಮತ್ತು ಶಿಲಾಶಾಸನಗಳು ಎರಡರಲ್ಲೂ ಕಂಡು ಬರುತ್ತವೆ. ಬ್ರಹ್ಮದೇವನ ಪ್ರೇರಣ ಭರತನಿಂದ, ರಾಜರು ದತ್ತಿಗಳನ್ನು ಕೊಡುವ ಸಂಪ್ರದಾಯ ಆರಂಭವಾಯಿತೆಂದು ಹೇಳುತ್ತವೆ.

# ೨. ವೀರಗಲ್ಲು ಶಾಸನಗಳು

ವೀರಗಲ್ಲುಗಳಲ್ಲಿ ಲಿಪಿ ಇರುವ ಹಾಗೂ ಲಿಪಿಯಿರದ ವೀರಗಲ್ಲುಗಳು ಎಂದು ಎರಡು ಪ್ರಕಾರಗಳು. ಲಿಪಿ ಇರದ ವೀರಗಲ್ಲುಗಳಲ್ಲಿ ವೀರ ನಿಂತಿರುವ ಚಿತ್ರವೋ, ಹೋರಾಡುತ್ತಿರುವ ಚಿತ್ರವೋ ಅಥವಾ ಗಾಯಗೊಂಡು ಕೆಳಗೆ ಬಿದ್ದಿರುವ ಚಿತ್ರವೋ ಇರುತ್ತದೆ. ಇವರಲ್ಲಿ ಮೂರು ಪಟ್ಟಿಕೆಗಳಿರುತ್ತವೆ. ಮೊದಲನೆಯದರಲ್ಲಿ ವೀರ ಹೋರಾಡುತ್ತಿರುವ ಚಿತ್ರವು, ಎರಡನೆಯದರಲ್ಲಿ ವೀರನನ್ನು ಅಪ್ಸರೆ ಸ್ತ್ರೀಯರು ದೇವಲೋಕಕ್ಕೆ ಕೊಂಡೊಯ್ಯುತ್ತಿರುವ ಚಿತ್ರ, ಮೂರನೆಯದರಲ್ಲಿ ವೀರನು ಲಿಂಗದ ಬಳಿ ಧ್ಯಾನ ಮಾಡುತ್ತಿರುವ ಚಿತ್ರವಿರುತ್ತದೆ. ಈ ವೀರಗಲ್ಲುಗಳನ್ನು ನೆತ್ತರು ಕೊಡಗೆ, ರುಧಿರಮಾನ್ಯ, ಎಂದು ಕರೆಯುತ್ತಾರೆ. ಈ ವೀರಗಲ್ಲುಗಳ ಜೊತೆಗೆ ಕೀಳ್ಗುಂಟೆಯನ್ನು ಹೋಲಿಸಲಾಗುತ್ತದೆ. 'ಕೀಳ್ಗುಂಟೆ' ಎಂದರೆ ರಾಜನೊಬ್ಬನು ಮರಣ ಹೊಂದಿದಾಗ ರಾಜನಿಗಿಂತ ಮುಂಚಿತವಾಗಿ ಆತ್ಮಹತ್ಯೆ ಮಾಡಿಕೊಂಡವನಿಗಾಗಿ ನಿಲ್ಲಿಸಿದ ಕಲ್ಲು ಎಂದರ್ಥ. ಇದರಂತೆ ಗೋವುಗಳ ರಕ್ಷಣೆಗಾಗಿ ತಮ್ಮ ಪ್ರಾಣವನ್ನು ನೀಡಿದ ವೀರತ್ವದ ಕಾರ್ಯಕ್ಕೆ 'ತುರುಗೋಳ್' ಎಂದು ಆ ಸ್ಥಳದಲ್ಲಿಯೂ ಕೂಡ ವೀರಗಲ್ಲುಗಳನ್ನು ನಿಲ್ಲಿಸಲಾಗುತ್ತಿತ್ತು.

## ೩. ಮಾಸ್ತಿಕಲ್ಲುಗಳು

ಮಾಸ್ತಿ ಎಂಬುವುದು ಮಹಾಸತಿಯ ತದ್ಭವ. ಗಂಡ ಸತ್ತಾಗ ಅವನೊಂದಿಗೆ ಚಿತೆ ಏರುವವಳು ಮಹಾಸತಿಯಾಗಿ ಆಕೆಯ ನೆನಪಿಗಾಗಿ ನಿಲ್ಲಿಸಿದ ಕಲ್ಲುಗಳೇ ಮಾಸ್ತಿಕಲ್ಲುಗಳು, ಸಹಾನುಗಮನಕಲ್ಲು, ಮದುವಳಿಗೆಕಲ್ಲು, ತೋಳಕ್ಕಗಲ್ಲು, ಬ್ಲಾಸನ ಹೋಳು ಇದಕ್ಕಿರುವ ಇತರ ಹೆಸರುಗಳು. ಮಾಸ್ತಿಕಲ್ಲುಗಳಲ್ಲಿ ಪ್ರೌಢ ಹೆಂಗಸಿನ ಚಿತ್ರವಿರುತ್ತದೆ. ಆಕೆ ತನ್ನ ಬಲಗೈಯನ್ನು ಮೇಲೆತ್ತಿ ಎತ್ತಿರುತ್ತಾಳೆ. ಅಂಗೈ ಸ್ಪಷ್ಟವಾಗಿ ಕಾಣುವಂತೆ ಬೆರಳುಗಳ ಬಿಡಿಬಿಡಿಯಾಗಿರುತ್ತವೆ. ಕೆಲವು ಮಾಸ್ತಿಕಲ್ಲುಗಳಲ್ಲಿ ಸ್ತ್ರೀ ಚಿತ್ರದ ಮುಂದೆ ಜ್ವಾಲೆಗಳಿರುವಂತೆ ಕೆತ್ತನೆ ಇರುತ್ತದೆ. ಇದು ಅವಳು ಕಿಚ್ಚನ್ನು ಹೊಕ್ಕಿರುವುದನ್ನು ಸೂಚಿಸುತ್ತದೆ. ಕರ್ನಾಟಕದಲ್ಲಿ 'ಬೇಕಟ್ಟೆ' ಶಾಸನ ಮಾಸ್ತಿಕಲ್ಲುಗಳಲ್ಲಿ ತುಂಬಾ ಪ್ರಸಿದ್ಧವಾದದು.

## ೪. ನಿಷಿಧಿಗಲ್ಲುಗಳು

'ನಿಷಿಧಿ' ಎಂಬುವುದು ನಿಷಿಧ್ ನಿಂದ ಬಂದಿದೆ. ನಿಷಿಧ್ ಎಂದರೆ ಕುಳಿತಿರುವುದು ಎಂದರ್ಥ. ನಿಷಿಧಿಗಲ್ಲುಗಳು ಜೈನ ಸನ್ಯಾಸಿಗಳು ಸಲ್ಲೇಖನ ವ್ರತದಿಂದ ಮರಣ ಹೊಂದಿರುವುದನ್ನು ತಿಳಿಸುತ್ತವೆ. ಇಲ್ಲಿ ಸಲ್ಲೇಖನ ವ್ರತವನ್ನು ಆಚರಿಸುವ ವ್ಯಕ್ತಿ ಗುರುವಿನ ಬಳಿ ಕುಳಿತು ಧರ್ಮ ಶ್ರವಣದಲ್ಲಿ ನಿರತನಾದ ಚಿತ್ರವಿರುತ್ತದೆ. ರಾಷ್ಟ್ರಕೂಟರ ನಾಲ್ಕನೆಯ ಇಂದ್ರ ಶ್ರವಣಬೆಳಗೊಳದಲ್ಲಿ ವಿಷ್ಣುವರ್ಧನನ ಪತ್ನಿ ಶಾಂತಲೆ ಸಲ್ಲೇಖ ಶಿವಗಂಗೆಯಲ್ಲಿ ಸಲ್ಲೇಖನದಿಂದ ದೇಹ ತ್ಯಾಗ ಮಾಡಿದಳು.

* ಉತ್ತರ ಭಾರತದಂತೆ ದಕ್ಷಿಣ ಭಾರತವು ಮೂಲ ಬ್ರಾಹ್ಮಿ ಲಿಪಿಯನ್ನು ತನ್ನ ಭಾಷೆಗಳಿಗೆ ಬಳಸಿಕೊಂಡರೂ. ಲಿಪಿಯಲ್ಲಿ ಹಲವು ಮಾರ್ಪಡುಗಳನ್ನು ಮಾಡಿಕೊಂಡು ಸಮೃದ್ಧತೆ ಮೆರೆಯಿತು.

* ತಮಿಳುನಾಡು ಪ್ರಥಮ ಸ್ಥಾನ ಪಡೆದಿದೆ.


* ಕರ್ನಾಟಕ ದ್ವಿತೀಯ ಸ್ಥಾನದಲ್ಲಿದೆ.

ಈ ನಿಟ್ಟಿನಲ್ಲಿ ಶಾಸನಗಳ ಸಂಖ್ಯೆಯು ಇದುವರೆಗೆ ಸಂಶೋಧನೆ ಮಾಡಿದಾಗ ಕರ್ನಾಟಕದಲ್ಲಿ ೨೦ ಸಾವಿರ ಶಾಸನಗಳನ್ನು ಸಂಗ್ರಹಿಸ-ಲಾಗಿದೆ.

# ಕರ್ನಾಟಕದ ಕೆಲವು ಪ್ರಮುಖ ಶಾಸನಗಳು.

1) ಹಲ್ಮಿಡಿ ಶಾಸನ
2) ಬಾದಾಮಿ ಶಾಸನ
3) ಶ್ರವಣಬೆಳಗೊಳ ಶಾಸನ
4) ಗಂಗಾಧರ ಶಾಸನ
5) ಅರ್ಜುನವಾಡ ಶಾಸನ
6) ಕುವರಲಕ್ಷ್ಮಿ ಶಾಸನ
7) ಬುಕ್ಕರಾಯನ ಶ್ರವಣಬೆಳಗೊಳ ಶಾಸನ
8) ಆತಕೂರ ಶಾಸನ
9) ತಿಡಗೊಳ ಶಾಸನ
10) ಚಂದ್ರವಳ್ಳಿ ಶಾಸನ

# ಹಲ್ಮಿಡಿ ಶಾಸನ




'ಹಲ್ಮಿಡಿ ಶಾಸನ'

ಹಲ್ಮಿಡಿ ಶಾಸನ ಕ್ರಿ.ಶ (450) ಇಸಂ.

* ಇದೊಂದು ದಾನ ಶಾಸನವಾಗಿದೆ.

* ದೊರೆತ ಸ್ಥಳ =

ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಹಲ್ಮಿಡಿ ಎಂಬ ಗ್ರಾಮದಲ್ಲಿ ದೊರೆತ ಶಾಸನ ಇದಾಗಿದೆ.

Principal,
G. P. Porwal Arts, Comm &
V. V. Salimath Sc. College
SINDGI-586128. College Code: 52..

* ಹಲ್ಮಿಡಿ ಶಾಸನದ ಭಾಷೆ: ಪ್ರಾಚೀನ ಹಳೆಗನ್ನಡ
* ಸಾಲುಗಳ ಸಂಖ್ಯೆ: 16 ಸಾಲುಗಳನ್ನು ಹೊಂದಿದೆ.
* ಕೆತ್ತಿಸಿದ ಅರಸ: ಕದಂಬರ ಅರಸ ಕಾಕುಸ್ಥವರ್ಮ.
* ಕನ್ನಡದ ಪ್ರಥಮ ಶಾಸನ ಇದಾಗಿದೆ.
* ಈ ಶಾಸನದ ಮೊದಲಿಗೆ ವಿಷ್ಣುವಿನ ಸ್ತುತಿ ಇದೆ.
ಈ ಶಾಸನದ ಆರಂಭದ ಅಥವಾ ಪ್ರಾರಂಭದಲ್ಲಿ ಸಂಸ್ಕೃತದಲ್ಲಿ -ದ್ದು ಉಳಿದೆಲ್ಲ ಭಾಗವು ಕನ್ನಡದಲ್ಲಿದೆ.
* ಈ ಶಾಸನದಲ್ಲಿ ಪೆತ್ತಜಯನ ಎಂಬ ಅಂಕಿತವನ್ನು ಪಡೆದಿದೆ.
ಪೊಗಳೆಪಟ್ಟಳ ಎಂಬ ಕರ್ಮಣಿ ರೂಪವನ್ನು ಕಾಣಬಹುದು
* 1936ರಲ್ಲಿ ಡಾ. ಎಂ. ಎಚ್. ಕೃಷ್ಣನವರು ಎಂಬುವವರಿಂದ ಈ ಶಾಸನ ಸಂಶೋಧಿಸಲ್ಪಟ್ಟಿತ್ತು ಇದನ್ನು ಕಲ್ಲಿನ ಮೇಲೆ ಕೆತ್ತಲಾಗಿದೆ.
ಇದು ಹಳಗನ್ನಡ ಹಾಗೂ ಬ್ರಾಹ್ಮಿ, ಲಿಪಿಗಳನ್ನು ಹೋಲುವ -ಂತ ಕನ್ನಡ ಲಿಪಿಯಾಗಿದೆ.
* ಕಲಭೋರರ ಶತ್ರುವಾದ ಕದಂಬರ ಅರಸ ಕಾಕುಸ್ಥವರ್ಮನು ಆಳುತ್ತಿದ್ದ ಇವನ (ಅವಧಿಯಲ್ಲಿ) ಅಧೀನದಲ್ಲಿ ನರಿದಾವಿಳೆ ನಾಡಿನಲ್ಲಿ ಮೃಗೇಶ ಮತ್ತು ನಾಗೇಶ ಎನ್ನುವ ಅಧಿಕಾರಿಗಳಿದ್ದರು. ಕೇಕಯ - ಪಲ್ಲವರು ಮತ್ತು ಕದಂಬರ ನಡುವೆ ನಡೆದ ಯುದ್ಧದಲ್ಲಿ ಜಯಗಳಿಸಿದ ವಿಜಯ ಅರಸನಿಗೆ ಹಲ್ಮಿಡಿ ಮತ್ತು ಮೂಳಿವಳ್ಳಿ ಎಂಬ ಗ್ರಾಮಗಳನ್ನು ದಾನವಾಗಿ ನೀಡಿದನು.

ಶಾಸನಗಳು ಕರ್ನಾಟಕದ ಪ್ರಾಚೀನ ಸಂಸ್ಕೃತಿಯ ಪ್ರತ್ಯಕ್ಷ ಸಾಕ್ಷಿಗಳು. ಅಶೋಕನ ಶಾಸನಗಳನ್ನು ಮೊದಲುಗೊಂಡು ಈ ನೆಲದಲ್ಲಿ ದೊರೆತ ಹಲವಾರು ಶಾಸನಗಳು ಇಲ್ಲಿಯ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಧರ್ಮ, ರಾಜಮಹಾರಾಜರ ಇತಿಹಾಸ ಅವರು ಮಾಡಿದ ಕಾರ್ಯ ಮೊದಲಾದ ಸಂಗತಿಗಳ ಮೇಲೆ ಬೆಳಕು ಚೆಲ್ಲುತ್ತವೆ. ಎಂ. ಎಂ. ಕಲಬುರ್ಗಿಯವರು ಹೇಳುವಂತೆ ಅವುಗಳ ಅಧ್ಯಯನ ಅರಣ್ಯದಂತೆ. ಪ್ರವೇಶವುಂಟು; ನಿರ್ಗಮನವಿಲ್ಲದಂತೆ ಕುತೂಹಲಮಯ. ಒಂದರ್ಥದಲ್ಲಿ ವೈಜ್ಞಾನಿಕ ಪುನರ್ ಸೃಷ್ಟಿಯಲ್ಲಿ ಶಾಸನಗಳ ಪಾತ್ರ ತುಂಬಾ ದೊಡ್ಡದು. ಇವು ಇತಿಹಾಸ ಸಂರಚನೆಯ ಪ್ರಮುಖ ಆಕರಗಳು. ಅದರಲ್ಲೂ ಪ್ರಮುಖ ಶಾಸನ ಎನಿಸಿಕೊಂಡ ಹಲ್ಮಿಡಿ ಶಾಸನವು ಸಾಹಿತ್ಯಕವಾಗಿ, ಭಾಷಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ವೈಜ್ಞಾನಿಕ ಮಹತ್ವದ ಶಾಸನ ಎನಿಸಿದೆ.

**ಶಾಸನ ದೊರೆತ ಸ್ಥಳ ಪರಿಚಯ.**

ಈ ಶಾಸನವು ಹಾಸನ ಜಿಲ್ಲೆಯ ಬಳಿಯಲ್ಲಿರುವ ಹಲ್ಮಿಡಿ ಎಂಬ ಸ್ಥಳದಲ್ಲಿ ದೊರೆತಿದೆ. ಹಲ್ಮಿಡಿ ಎಂಬ ಹೆಸರು ಪಲ್ಮಿಡಿ ಎಂಬುದರ ರೂಪಾಂತರ. ಹಲ್ಮಿಡಿ ಎಂಬುದು ಒಂದು ಚಿಕ್ಕ ಹಳ್ಳಿಯಾಗಿದ್ದು, ಈ ಊರು ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನಲ್ಲಿದೆ. ಊರಿನ ವೀರಭದ್ರೇಶ್ವರ ದೇವಾಲಯದ ಆವರಣದ ಈ ಶಾಸನವಾಗಿದೆ. ಇದು ಹಾಸನ ಬೇಲೂರು - ಚಿಕ್ಕಮಗಳೂರು ರಸ್ತೆಯಲ್ಲಿ ಇರುತ್ತದೆ. ಬೇಲೂರಿನಿಂದ ೧೨ ಕಿ. ಮೀ. ಅಂತರದಲ್ಲಿ 'ಹಲ್ಮಿಡಿಗೆ' ಹೋಗುವ ದಾರಿಯನ್ನು ಸೂಚಿಸುವ ದೊಡ್ಡ ಫಲಕವಿದ್ದು ಅಲ್ಲಿಂದ ೭ ಕಿ.ಮೀ. ತೆರಳಿದರೆ ಹಲ್ಮಿಡಿಯನ್ನು ತಲುಪಬಹುದು.

# ಹಲ್ಮಿಡಿ ಶಾಸನದ ಮೂಲ ಪಠ್ಯ

೧. ಜಯತಿ ಶ್ರೀ ಪರಿಷ್ವಙ್ಗ ಶಾರ್ಙ್ಗ [ವ್ಯಾನತಿ] ರಚ್ಯುತಃ ದಾನವಾ
ಕ್ಷ್ಣೋರ್ಯುಗಾನ್ತಾಗ್ನಿಃ [ಶಿಷ್ಟಾನಾನ್ತು] ಸುದರ್ಶನಃ]

೨. ನಮಃ ಶ್ರೀ ಮತ್ಕದಂಬಪನ್ತ್ಯಾಗ ಸಂಪನ್ನನ್ ಕಲಭೋರ[ನಾ] ಅರ ಕ

೩. ಕುಸ್ಥಭಟ್ಟೋರನಾಳೆ. ನರಿದಾವಿ[ಳೆ] ನಾಡುಳ್ ಮೃಗೇಶನಾ.

೪. ಗೇನ್ದ್ರಾಭೀಳ ಭಟಹರಪ್ಪೋರ್ ಶ್ರೀ ಮೃಗೇಶನಾಗಾಹ್ವಯ.

೫. ರಿಬ್ಬರಾ ಬಟರಿಕುಲಾಮಲವ್ಯೋಮತಾರಾಧಿನಾಥನ್ನಳಪ.

೬. ಗಣಪಶುಪತಿ ದಕ್ಷಿಣಾಪಥ ಬಹುಶತಹವನಾ

೭. ಹವ[ದು] ಣ್ಡ ಪಶುಪ್ರದಾನ ಶೌರ್ಯೋದ್ಯಮ ಭರಿತೋ
[ನ್ದಾನ] ಪ

೮. ಶುಪತಿಯೆನ್ದು ಪೊಗಳೆಪ್ಪೊಟ್ಟಣ ಪಶುಪತಿ

೯. ನಾಮಧೇಯನಾ ಸರಕ್ಕೆಲ್ಲಭಟರಿಯಾ ಪ್ರೇಮಾಲಯ.

೧೦. ಸುತನ್ಗೆ ಸೇನ್ದ್ರಕಬಣೋಭಯ ದೇಶದಾ ವೀರಪುರುಷ ಸಮಕ್ಷ

೧೧. ದೆ ಕೇಕಯ ಪಲ್ಲವರಂ ಕಾದೆರೆದು ಪೆತ್ತಜಯನಾ ವಿಜ

೧೨. ಅರಸಂಗೆ ಬಾಳ್ಗಳ್ಚು ಪಲ್ಮಿಡಿಉಂ ಮೂಳುವಳ್ಳಿಉಂ.

೧೨. [illegible]

೧೩. [illegible]

೧೪. [illegible]

೧೫. [illegible]

## * ಶಾಸನ ಯುಗ

ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರೆತಿದೆ. ಕನ್ನಡ ಸಾಹಿತ್ಯದ ಹಲವು ಕೃತಿಗಳು ಲುಪ್ತವಾಗಿವೆ. ಇಲ್ಲಿಯವರೆಗಿನ ಸಂಶೋಧನೆಗಳ ಪ್ರಕಾರ ಕವಿರಾಜಮಾರ್ಗವು ಕನ್ನಡದ ಮೊದಲ ಅಲಂಕಾರ ಕೃತಿಯಾದರೆ, ವಡ್ಡಾರಾಧನೆ ಕನ್ನಡದ ಮೊದಲ ಗದ್ಯವಾಗಿದೆ. ಹಾಗೆಯೇ ಪಂಪನ ಆದಿಪುರಾಣ ಮೊದಲ ಕಾವ್ಯವಾಗಿದೆ. ಇತಿಹಾಸವು ಹೇಳುವಂತೆ ಶಾತವಾಹನ ಸಾಮ್ರಾಜ್ಯದ ನಂತರ ಪಟ್ಟಕ್ಕೆ ಬಂದ ಕದಂಬರು ಕನ್ನಡ ನಾಡು ನುಡಿಗಳಿಗೆ ಸಾಕಷ್ಟು ಕೊಡುಗೆಗಳನ್ನು ನೀಡಿದ್ದಾರೆ. ಈಗಿನ ಉತ್ತರ ಕನ್ನಡ ಜಿಲ್ಲೆಯ ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ತಮ್ಮ ಆಳ್ವಿಕೆಯನ್ನು ದಕ್ಷಿಣ ಭಾರತದಲ್ಲಿ ಹಾಗೂ ಉತ್ತರದ ಅಲ್ಲಲ್ಲಿ ಸಾಮಂತರನ್ನು ಅಧಿಕಾರಿಗಳನ್ನು ನೇಮಿಸಿ ತಮ್ಮ ರಾಜ್ಯ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡು ಕನ್ನಡ ನುಡಿಯ ಬೆಳವಣಿಗೆಗಾಗಿ ಹಲವು ಮಹತ್ವದ ಕಾರ್ಯಗಳನ್ನು ಕೈಗೊಂಡಿದ್ದಾರೆ.

ಕದಂಬರ ಕಾಲದ ಕನ್ನಡವನ್ನು ಪೂರ್ವದ ಹಳಗನ್ನಡವೆಂದು ಕರೆಯಲಾಗಿದೆ.

ಕದಂಬರ ಕಾಲದ ಕನ್ನಡವನ್ನು ಪೂರ್ವ ಹಳಗನ್ನಡವೆಂದು ಕರೆಯಲಾಗಿದೆ. ಈ ಕಾಲದ ಕನ್ನಡ ಲಿಪಿ ಹಳಗನ್ನಡದ ಲಿಪಿಗಿಂತಲೂ ಭಿನ್ನವಾಗಿ ಕಂಡು ಬರುತ್ತದೆ. ಇಲ್ಲಿಯವರೆಗಿನ ಸಂಶೋಧನೆಗಳ ಪ್ರಕಾರ ಇಂತಹ ಲಿಪಿಯಲ್ಲಿ ದೊರೆತಿರುವ ಕನ್ನಡದ ಅತ್ಯಂತ ಹಳೆಯ ಶಿಲಾಶಾಸನವೇ ಈ ಹಲ್ಮಿಡಿ ಶಾಸನ' ಈ ಶಾಸನದ ಕಾಲವನ್ನು ಕ್ರಿ.ಶ. ೪೫೦ ಎಂದು ಅಂದಾಜಿಸಲಾಗಿದೆ. ಶಾಸನದಲ್ಲಿ ದೊರೆತಿರುವ ಕೆಲವು ಕನ್ನಡ ಪದಗಳ ಆಧಾರದಲ್ಲಿ ಈ ಕಾಲವನ್ನು ಹೇಳಲಾಗಿದ್ದು ಇದು ಕನ್ನಡದ ಪ್ರಥಮ ಶಿಲಾ ಶಾಸನವೆಂಬ ಹಿರಿಮೆಗೂ ಪಾತ್ರವಾಗಿದೆ. ಈ ಶಾಸನವು ಕದಂಬರ ರಾಜ ಕಾಕುಸ್ಥ(ತ್ಸ) ವರ್ಮ-ನ ಆಡಳಿತವನ್ನು ಹೇಳುತ್ತದೆ. ಇದೊಂದು "ವೀರಗಲ್ಲು" (Hero stone) ಎಂದು ಪರಿಗಣಿಸಲ್ಪಟ್ಟಿದೆ. ಚಿತ್ರದಲ್ಲಿ ತೋರುವಂತೆ ಕನ್ನಡ ಲಿಪಿಯು 'ಕಲ್ಲುವ ಗ್ರಾಂಥಿಕ Elongated Script(PHS) ರೀತಿಯನ್-ನ್ನು ಹೋಲುವಂತಿದ್ದು ಇದು ಕದಂಬರ ಕಾಲದ ಕನ್ನಡ ಲಿಪಿಯೆಂದು ಹೇಳಲಾಗಿದೆ. ಲಿಪಿಯು ಭಿನ್ನವಾಗಿದ್ದರೂ ಸಹ ಶಾಸನದಲ್ಲಿರುವ ಭಾಷೆಯು ಮತ್ತು ನುಡಿಯು ಕನ್ನಡ ನಾಡಿನ ಹಿರಿಮೆಯನ್ನು ತಿಳಿಸುತ್ತದೆ.

ದಾಕ್ಷಿಣಾತ್ಯ ಬ್ರಾಹ್ಮೀ ಲಿಪಿಯಲ್ಲಿರುವ ಈ ಶಾಸನದ ಮೊದಲೆರಡು ಸಾಲುಗಳಲ್ಲಿ ಅಚ್ಯುತನ ಧ್ಯಾನವನ್ನು ಸಂಸ್ಕೃತ ಭಾಷೆಯ ಅನುಷ್ಟುಪ್ ಶ್ಲೋಕದಲ್ಲಿ ಹೇಳಲಾಗಿದೆ. "ಲಕ್ಷ್ಮಿಯೊಡನಿರುವ ಅಚ್ಯುತನು ಶಾರ್ಙ್ಗವೆಂಬ ಬಿಲ್ಲನ್ನು ಬಗ್ಗಿಸಿ ದಾನವರಿಗೆ ಪ್ರಳಯ ಕಾಲದ ಅಗ್ನಿಯಂತೆಯೂ ಶಿಷ್ಟರಿಗೆ ಸುದರ್ಶನ ಚಕ್ರದಂತೆಯೂ ತೋರುತ್ತಾನೆ." ಎಂಬ ವರ್ಣನೆಯಿ-ದ್ದು ನಂತರದ ಸಾಲುಗಳು ರಾಜನಿಗೆ ನಮನಗಳನ್ನು ಸಲ್ಲಿಸುವ ಮತ್ತು ಅಲ್ಲಿ ನಡೆದ ಘಟನಾವಳಿಯನ್ನು ತೆರೆದಿಡುತ್ತವೆ.

ಹಾಗೆ ನಂತರನ್ನು ಮತ್ತು ಕುಲಭೂಷಣರ ರತ್ನ ಉಪದೇಶಿಸಿದ
ದಿಗಂಬರರ ಶಾಸ್ತ್ರ(ತ್ರ) ಭಟ್ಟಾರಕರು "ಶ್ರೀ ಗೊಂಡ ಭಟ್ಟರ"
ಮಂದಿರಗಳು ನಿರ್ಮಲ ಆಕಾಶಕ್ಕೆ ಚಂದ್ರನಂತೆ ಹೊಳೆಯುವ
ಮಂಟಪಗಳು ಇಂಥ ಜಿನನ ಕೀರ್ತಿ ತನ್ನ ಆಕೃತಿ ಮಂದಿರ
ನಿರ್ಮಾಣಕ್ಕೆ ಹಣ (ದಾನ) ನೀಡಿದ್ದ. ಪ್ರಸಿದ್ಧವಾದ ದಕ್ಷಿಣಾ
ಸೇವಾರ್ಥಕ್ಕೆ ಹಣ ಮತ್ತು ಬಳದಾನದ
ಪಕ್ಕದಲ್ಲಿ ನೂರಾರು ಸಮುದ್ರಗಳೆಂಬ ಮತ್ತು ಬಳದಾನದ
-ವನ್ನು ಮಾಡಿ ಶೌರ್ಯ ತೋರಿದ್ದ ದಾನ ಪಡೆದರು. ಎಂದು
ತೋರಿಸಿಕೊಂಡಿದ್ದೆ. ಇದನ್ನು 'ಸೇಂದ್ರಕರು' ಮತ್ತು
'ಬಾರ' ಸ್ವಸ್ವಾಮ್ಯವನ್ನು ಸೇರಿಸಿಕೊಂಡು ಕೇಳಿಕೊಂಡು ಪಲ್ಲವರ
-ಪುರು ದಿಗಂಬರ ಪರವಾಗಿ ಯುದ್ಧ ಮಾಡಿ ಬಂದು ತಂದು
ಕೊಟ್ಟು, ಅದಕ್ಕಾಗಿ 'ಸೇಂದ್ರಕ' ಮತ್ತು 'ಬಾಣ' ಹೇಳಿದ
ಜನರ ಸ್ವಾಮ್ಯದಲ್ಲಿ ಪಲ್ಲಡಿ (ಪಲ್ಲಡಿ) ಮಾನ್ಯ ಮಾಡಲ್ಪಟ್ಟ
(ಇಂದಿನ ಮುಗಳಿಯನ್ನು) ಮನ್ಯ ಅವನ ಆಧೀನಕ್ಕೆ
ಶ್ರೀ ಪೋಷಕರಾಗಿ ಕೊಡಲಾಯಿತು. ಇಂದು ಮಹಾದಾನ
ಕೆತ್ತಿ ಆಳಿದ ಮಹಾದಾನ ಕೊಡುವ ಸಂದರ್ಭವಾಗಲು
ನಾಡ ಅಧಿಕಾರಿಗಳಾದ ಶ್ರೀ ಮೈಗೇರ ಮತ್ತು ನಾಗ ಅರಸುಗಳು
ಕಾಪಾಡಿದ್ದ ಆ ದಾನಗಳನ್ನು ಮುಂದೆಯೂ ನೀಡಿದರು
ಈ ದಾನವನ್ನು ಕಿರ್ತಿಗೆ ಪಾತ್ರ ಬರುತ್ತದೆ. ಸ್ವಸ್ಥಿಕ ಹರಿದ
ಮಾನ್ಯವಾಗಿ ಕುರುಂಬಡಿಯನ್ನು ಬಿಟ್ಟುಕೊಟ್ಟರು.
ಇದನ್ನು ಕಡೆಗಣಿಸುವವನೂ ಕೂಡ ಮಹಾಪಾತಕ ಎಂದಾಗು
-ವುದು. ಮುಂದೆ ಶಾಸನದ ಎಡ ಪಕ್ಕದಲ್ಲಿ ಇರುವ ಗದ್ದೆಯ
ಪಕ್ಕದಲ್ಲಿ ಬಟ್ಟಲಿಗೆ ಹತ್ತನೆಯ ಒಂದು ಭಾಗದ ಹಣಕ್ಕೆ
ಮಾನ್ಯವನ್ನು ಕೊಟ್ಟರು ಎಂದು ಬರೆಯಲಾಗಿದೆ.

## ಶಾಸನದ ಮಹತ್ವ

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಹಾಗು ಇತಿಹಾಸದ ದೃಷ್ಟಿಯಿಂದ ಈ ಶಾಸನ ಬಹಳಷ್ಟು ಮಹತ್ವವನ್ನು ಪಡೆದುಕೊಂಡಿದೆ.

೧. ಭಾಷಿಕ ಮಹತ್ವ
೨. ಸಾಹಿತ್ಯಿಕ ಮಹತ್ವ
೩. ಸಾಂಸ್ಕೃತಿಕ ಮಹತ್ವ
೪. ಐತಿಹಾಸಿಕ ಮಹತ್ವ

### ೧. ಭಾಷಿಕ ಮಹತ್ವ:-

ಕ್ರಿ.ಶ. ೪೫೦ ರಲ್ಲಿ ನಮ್ಮ ಭಾಷೆಯ ಅವಸ್ಥೆ ಹೇಗಿತ್ತು ಎಂಬುವುದನ್ನು ಈ ಶಾಸನದಲ್ಲಿ ನಾವು ಕಾಣಬಹುದು. ಇಲ್ಲಿಯ ಭಾಷೆಯನ್ನು ಪೂರ್ವದ ಹಳಗನ್ನಡ ಎಂದು ನಿರ್ಧರಿಸಲಾಗಿದೆ. ಇಲ್ಲಿ ೨೦ ರಿಂದ ೨೫ ಕನ್ನಡ ಪದಗಳಿವೆಯೆಂದು ಎಂ. ಎಚ್. ಕೃಷ್ಣಯ್ಯನವರು ಗುರುತಿಸಿದ್ದಾರೆ. ಬಳಕೆಯಾದ ಕೆಲವೇ ಪದಗಳ ಆಧಾರದ ಮೇಲೆ ಆ ಕಾಲದ ಭಾಷಾ ಪ್ರವೃತ್ತಿಯನ್ನು ನಾವು ಅರಿಯಬಹುದಾಗಿದೆ.

*ಉದಾ:- ಭಟರಿಕುಲನ್, ಕಳ್ದನ್, ಅಳ್ಪೊನ್ — ಪ್ರಥಮ ಪುರುಷ ಏಕವಚನ

*ಕೊಟ್ಟಾರ್, ಬಿಟ್ಟಾರ್, ಅಳ್ವಾರ್ → ಪ್ರಥಮ ಪುರುಷ ಬಹುವಚನ

*ಅದಾನ್ → ದ್ವಿತೀಯಾ ವಿಭಕ್ತಿ

*ಭಟರಿಯಾ, ಕಲಭೋರನಾ → ಷಷ್ಠಿ ವಿಭಕ್ತ್ಯರ್ಥ

* ನಾಡುಳ್, ಆಂತಲುದುಳ್ → ಹಳಗನ್ನಡ ಸಪ್ತಮಿ ವಿಭಕ್ತಿ
* ಎರಡು → ಇ > ಎ ವ್ಯತ್ಯಾಸ
* ಪೆಳ್ದಡಿಯುಂ, ಯುಳಿಯಳ್ತಿಯುಂ → ವಿಸಂಧಿ
* ಪೇತ್ರಜಿಂಯನ್ → ಅರಿಸಮಾಸ
* ಪೋಗಳ್ಪೊಟ್ಟುಂ → ಕರ್ಮಣಿ ಪ್ರಯೋಗ
* ಒರ್, ಆರ್, ಉನ್ → ಆಖ್ಯಾತ ಪ್ರತ್ಯಯಗಳು.

೨. ಸಾಹಿತ್ಯಕ ಮಹತ್ವ :-

ಹಾಗೆ ನೋಡಿದರೆ ಈ ಹಲ್ಮಿಡಿ ಶಾಸನವು ಸಾಹಿತ್ಯದ ಅಂತಹ ಗಹನವಾದ ಲಕ್ಷಣಗಳನ್ನೇನೂ ಹೊಂದಿಲ್ಲವಾದರೂ ಇಲ್ಲಿ ಬಳಕೆಗೊಂಡ ಕೆಲವು ಪದಗಳು ಸಾಹಿತ್ಯ ಕಂಪನ್ನು ಹೊಂದಿ ಮುಂದಿನ ಸಾಹಿತ್ಯದ ಸೃಷ್ಟಿಗೆ ಮುನ್ಸೂಚನೆಯಂತಿವೆ. ಕನ್ನಡದ ಎಳೆಯ. ಸಂಸ್ಕೃತದ ಪ್ರಭಾವ ಇದ್ದಾಗಲೂ ಈ ಶಾಸನದಲ್ಲಿ ಕೆಲವು ಸಾಹಿತ್ಯಕಂಪ ಹೊಂದಿರುವ ಪದಗಳನ್ನು ಹೀಗೆ ಗುರುತಿಸಬಹುದು.


ಉದಾ :- * ನರಿದಾವಿಳೆ ನಾಡುಳ್

* ಕುಲಮಲವ್ಯೋಮ ತಾರಾಧಿನಾಥ
* ಸರಕ್ಕೆಲ್ಲಬಟರಿಂಯ
* ಪ್ರೇಮಾಲಯಸುತನ್
* ಮಹಾಪಾತಕಂ ಸ್ವಸ್ತಿ

೩. ಸಾಂಸ್ಕೃತಿಕ ಮಹತ್ವ

ದಾನ ನಮ್ಮ ಸಂಸ್ಕೃತಿಯ ಬಹುದೊಡ್ಡ ಮೌಲ್ಯ "ಕೇಳುವ ಕೈಗಿಂತ ಕೊಡುವ ಕೈ ಮೇಲು" ಎಂಬುದು ಈ ದಾನದ ಮೌಲ್ಯವನ್ನು ಎತ್ತಿ ಹೇಳುತ್ತದೆ ಮಾತು. ಈ ದೃಷ್ಟಿಯಿಂದ ಹಲ್ಮಿಡಿ ಶಾಸನವು ಮೂರು ದಾನಗಳನ್ನು ಪ್ರತಿನಿಧಿಸುವ ಶಾಸನವಾಗಿದೆ. ೧. ಇಂದ ೧೩ನೇ ಸಾಲಿನವರೆಗೆ ಕೇಕೆಯ ಪಲ್ಲವರನ್ನು ಸೋಲಿಸಲು ಕದಂಬರಿಗೆ ಸಹಾಯ ಮಾಡಿದ ಕೆಲ್ಲಗೊಂಡ ಭಟರಿ' ಕುಲದ ಆಳುಪ ವಂಶದ ವಿಜಯ ಅರಸನಿಗೆ ಕದಂಬ ಸೈನ್ಯದ ಸೈನಿಕರಾದ ಮೃಗೇಶ ಮತ್ತು ನಾಗರು ಹಲ್ಮಿಡಿ ಮತ್ತು ಮೂಳಿವಳ್ಳಿ ಗ್ರಾಮಗಳನ್ನು ದಾನವಾಗಿ ನೀಡಿದ ವಿಷಯವಿದೆ. ಅದರಂತೆ ಕೊನೆಯ ೧೬ನೇ ಸಾಲಿನಲ್ಲಿ ಅಂದರೆ ಶಾಸನದ ಎಡ ಪಕ್ಕದಲ್ಲಿ ಇಲ್ಲಿನ ಗದ್ದೆಯ ಪಕ್ಕದಲ್ಲಿ ಭಟ್ಟರಿಗೆ ಹತ್ತನೆಯ ಒಂದು ಭಾಗದ ತೆರಿಗೆ ಮನ್ನಾಯಿತಿಯನ್ನು ಕೊಡಲಾಗುವುದು ಎಂದು ಬರೆಯಲಾಗಿದೆ. ಇದು ಭೌತಿಕ ದಾನದ ಮಹಿಮೆಯಾದರೆ. ಕಾಳಗದಲ್ಲಿ ಹೋರಾಡಿದ ವೀರನ ಶೌರ್ಯವನ್ನು ಸಮರಂಭದಲ್ಲಿ ವೀರ ಸತ್ತರೆ, ಬದುಕಿ ಬಂದ ಪಕ್ಷದಲ್ಲಿ ಆತನಿಗೆ ವೀರಸ್ವರ್ಗ ಹೊಂದಿದ ಪಕ್ಷದಲ್ಲಿ ಆತನ ಕುಟುಂಬದವರಿಗೆ ನೆರವಾಗಲು ಕೊಡುವ ದಾನವು 'ಬಾಳ್ಗಳ್ಚು' ಎನಿಸಿಕೊಳ್ಳುತ್ತದೆ. ಹೀಗೆ ಕನ್ನಡದ ಪ್ರಥಮ ಶಾಸನ ಒಂದರಲ್ಲೇ ಮೂರು ದಾನ ವಿಷಯಗಳು ಪ್ರಕಟವಾಗಿರುವುದನ್ನು ಮತ್ತು ವೀರ ಯೋಧನಿಗೆ ನೀಡುವ ಗೌರವವನ್ನು ಗಮನಿಸಿದರೆ. ನಮ್ಮ ಹಿಂದಿನ ಜನ ದಾನದತ್ತ ಹೆಚ್ಚಿನ ಆದ್ಯತೆಯಿಂದ ಎಷ್ಟೊಂದು ಮಹತ್ವ ನೀಡುತ್ತಿದ್ದರೆಂಬುದು ನಮಗೆ ತಿಳಿಯುತ್ತದೆ.

# ಬಾದಾಮಿ ಶಾಸನ



ಬಾದಾಮಿ ಶಾಸನ :-

ಕಪ್ಪೆ ಅರಭಟ ಕ್ರಿ.ಶ 7ನೇ ಶತಮಾನ

* ಇದೊಂದು ಪ್ರಶಸ್ತಿ ಶಾಸನವಾಗಿದೆ.

* ಸ್ಥಳ — ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಸಮೀಪದಲ್ಲಿರುವ ತಟ್ಟುಕೋಟೆ ಎಂಬ ಸ್ಥಳದ ವಾಯುವ್ಯ ದಿಕ್ಕಿನಲ್ಲಿರುವ ಬಂಡೆಗಳಿನ ಮೇಲೆ ಕೊರೆಯಲಾಗಿದೆ.

* ಭಾಷೆ :- ಹಳೆ ಕನ್ನಡ

* ಕಪ್ಪೆ ಅರಭಟ್ಟನ ಗುಣಗಾನ ಮಾಡುವ ಶಾಸನವಾಗಿದೆ.
* ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ಸಂಸ್ಕೃತ ಶ್ಲೋಕವೊಂದನ್ನು ಬಿಟ್ಟರೆ ಉಳಿದೆಲ್ಲಾ ಭಾಗವು ತ್ರಿಪದಿಯಲ್ಲಿ ರಚನೆಯಾಗಿದೆ.

* ಪ್ರತಿದಿನಯನ್ನು ಮೊಟ್ಟ ಮೊದಲು ಪ್ರಿಂಯಾಗೆ ಮೊದಲಾದ ಶಾಸನವಾಗಿದೆ.

ಸಾಧಂಗೆ ಸಾಧು ಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆರನಲ್ಲ.

# ಶ್ರವಣಬೆಳಗೊಳ ಶಾಸನ

ಶ್ರವಣ ಬೆಳಗೊಳ ಶಾಸನ :—

* ಕಾಲ :- ಕ್ರಿ.ಶ 7ನೇ ಶತಮಾನ


* ಈ ಶಾಸನದಲ್ಲಿ ವಿವಿಧ ವ್ಯಕ್ತಿಗಳಿದ್ದು ಜೈನ ಧರ್ಮಕ್ಕೆ ಸಂಬಂಧಿಸಿದಾಗಿದೆ.

* ನಂದಿಸೇನ ಮುನಿಯ ಕೆಟ್ಯಾರೆಲ್ ಆಗ್ಗೆ ವೈರಾಗ್ಯಗಳನ್ನು ಪ್ರತಿಬಿಂಬಿಸುವ

ಶಾಸನ ಶ್ರವಣ ಬೆಳಗೊಳ ಶಾಸನವಾಗಿದೆ.


ಈ ಶಾಸನವು ಜೈನ ಧರ್ಮಕ್ಕೆ ಸಂಬಂಧಿಸಿದೆ.

# ಶ್ರವಣಬೆಳಗೊಳ ಶಾಸನ



"ಸುರಚಾಪಂಬೋಲೆ ವಿದ್ಯುಲತೆಗಳ ತೆರವೋಲ್ ಮಂಜುವೋಲ್ ತೋರು
ಬೇಗಂ. ಪಿರಿಗುಂ ಶ್ರೀರೂಪಲೀಲಾಧನವಿಭವ ಮಹಾರಾಶಿಗಳ್ ನಿಲ್ಲವಾರ್ಗಂ
ಪರಮಾರ್ಥಂ ಮೆಚ್ಚೆ ನಾನೀ ಧರಣಿಯೊಳಿರಲಾನೆಂದು
ಸನ್ಯಾಸನಂಗೆ ಯ್ದುರುಸತ್ವಂ ನಂದಿಸೇನ ಪ್ರವರ ಮುನಿವರ
- ನ್ ದೇವಲೋಕಕ್ಕೆ ಸಂದಾನ್"

# ಗಂಗಾಧರ ಶಾಸನ



ಗಂಗಾಧರ ಶಾಸನ :-

* ಕಾಲ :- ಕ್ರಿ.ಶ 960.
* ಕರ್ತೃ :- ಪಂಪನ ತಮ್ಮನಾದ ಜಿನವಲ್ಲಭ
* ಸ್ಥಳ :- ಆಂಧ್ರಪ್ರದೇಶ ಕರೀಂ ನಗರ ಜಿಲ್ಲೆಯ ಕುರ್ಕ್ಯಾಲ ಎಂಬಲ್ಲಿ ಪತ್ತೆಯಾಗಿದೆ. (ಬೊಮ್ಮಲಗುಟ್ಟ) (ವೃಷಭಗಿರಿ.)
* ಈ ಶಾಸನವು ಪಂಪನ ವಿವರಗಳನ್ನು ಹೊಂದಿದೆ. ಪಂಪನ ಜೀವನ, ಮನೆತನ, ಬಂಧುಬಳಗ ಹೊಂದಿರುವ ಶಾಸನ ಇದಾಗಿದೆ.
* ಶಾಸನ ಬೆಳಕಿಗೆ ಬಂದ ವರ್ಷ.
  1996 ರಲ್ಲಿ ನಂಬೂರಿ ವೆಂಕಟರಮಣ ಶಾಸ್ತ್ರಿ
* ಈ ಶಾಸನ ಕೆತ್ತಿದವರು
  → (ಬು) ಪರಿಯಪ್ಪ

ಗಂಗಾಧರ ಶಾಸನವು 30 ಅಡಿ ಉದ್ದ x 30 ಅಡಿ ಅಗಲವಾದ ಬಂಡೆಗಲ್ಲಿನ ಮೇಲೆ ಕೆತ್ತಲಾಗಿದೆ.

* ಇದರಲ್ಲಿ ಶೀರ್ಷಿಕೆಗಳು ಮೂರು ಸಂಸ್ಕೃತ ಪದ್ಯಗಳು ಆರು ಕನ್ನಡ ಪದ್ಯಗಳು ಮತ್ತು ಮೂರು ತೆಲುಗು ಕಂದಪದ್ಯಗಳು ಕಂಡು ಬರುತ್ತವೆ.
* ಈ ಶಾಸನವನ್ನು ಮೊದಲು ಓದಿದವರು.
  ಲಿನ್, ವೆಂಕಟರಮಣಯ್ಯ
* ಗದ್ಯ ಪದ್ಯಾತ್ಮಕವಾದ ಲೌಕಿಕ ಶಾಸನ ಇದಾಗಿದೆ

# ಅರ್ಜುನವಾಡ ಶಾಸನ

ಅರ್ಜುನವಾಡ ಶಾಸನ ಕಾಲ :-
ಕ್ರಿ.ಶ 1260. 12ನೇ ಶತಮಾನ

ಸ್ಥಳ :- ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯಿಂದ ಅರ್ಜುನವಾಡ ಗ್ರಾಮದ ಹರಿಹರ ಕೆರೆ ನಡುವಿನ ಆವರಣದಲ್ಲಿ ದೊರೆತಿದೆ.

* ಬಸವಣ್ಣನವರು ಜೀವನ ಇತಿಹಾಸ ಹಾಗೂ ಅವರ ವಂಶಾವಳಿಯ ಮೇಲೆ ಬೆಳಕು ಚೆಲ್ಲುವ ಶಾಸನವಾಗಿದೆ.

* ಇದೊಂದು ದಾನ ದತ್ತಿ ಶಾಸನವಾಗಿದೆ.

# ಕುವರಲಕ್ಷ್ಮಣ ಶಾಸನ

ಕಾಲ:- ಕ್ರಿ.ಶ. ೧೧-೨೦.

ಸ್ಥಳ:- ಹಳೇಬೀಡಿನ ಹೊಯ್ಸಳೇಶ್ವರ ದೇವಸ್ಥಾನದ ಪ್ರಾಕಾರದಲ್ಲಿ ಪಶ್ಚಿಮದ ಕಡೆ ಇರುವ ಕಂಬದಲ್ಲಿ ಈ ಶಾಸನ ಇದೆ.

* ಇಮ್ಮಡಿ ಬಲ್ಲಾಳನು ಮೃತನಾದಾಗ ಆತನ ಸೇನಾಧಿಪತಿ ಕುವರಲಕ್ಷ್ಮಣ ಚಮೂಪನು ತನ್ನ ಒಂದು ಸಾವಿರ ಅನುಯಾಯಿಗಳೊಡನೆ ಪ್ರಾಣ ತ್ಯಾಗವನ್ನು ಮಾಡುತ್ತಾನೆ.

* ಅವನ ಪತ್ನಿ ಸುಗ್ಗಲದೇವಿಯೂ ಅವನೊಡನೆ ಪ್ರಾಣ ತ್ಯಾಗವನ್ನು ಮಾಡುತ್ತಾಳೆ. ರಾಜ ಸತ್ತಾಗ ಅವನೊಡನೆ ಸಾಯುವೆನೆಂದು ಭಾಷೆಯನ್ನು ಕೊಟ್ಟು ಅದರಂತೆ ನಡೆಯುತ್ತಿರುವವರನ್ನು ವೇಳೆವಾಳಿ ಎಂದು ಕರೆಯುತ್ತಾರೆ. ವೇಳೆವಾಳಿಗಳ ಮತ್ತೊಂದು ಹೆಸರೇ ಗರುಡರು. ಈ ಗರುಡ ಪದ್ಧತಿ ಹೊಯ್ಸಳರ ಕಾಲದಲ್ಲಿ ಹೆಚ್ಚಾಗಿತ್ತು. * ಇದನ್ನು ಪ್ರತಿಬಿಂಬಿಸುವ ಶಾಸನ ಇದಾಗಿದೆ.

# ಬುಕ್ಕನ ಶ್ರವಣಬೆಳಗೊಳ ಶಾಸನ

ಬುಕ್ಕ ವೈಷ್ಣವರಿಂದ ಜೈನರಿಗಾಗುತ್ತಿದ್ದ ಜೈನರಿಗೆ ಹಾನಿ ತೊಂದರೆಗಳನ್ನು ತಡೆದನು. ಜೈನರು ಬುಕ್ಕರಾಯನಲ್ಲಿಗೆ ದೂರನ್ನು ಒಯ್ದಾಗ ಆತನು ಎರಡು ಧರ್ಮದವರೂ ಒಂದು; ಭೇದವೆಣಿಸಲಾಗದು ಎರಡು ಧರ್ಮ ಒಂದೇ ಎರಡೂ ಪಂಗಡಗಳ ಧುರೀಣರನ್ನು ಕರೆಸಿ ಅವರ ಸ್ನೇಹವನ್ನುಂಟು ಮಾಡಿದನು. ಆ ಒಪ್ಪಂದವನ್ನು ಶಾಸನ ಮಾಡಿ ನಿಲ್ಲಿಸಲಾಗಿದೆ. ವಿಜಯನಗರ ರಾಯರ ಧರ್ಮಸಹಿಷ್ಣುತೆಗೆ ಸಾಕ್ಷಿ ಈ ಶಾಸನ.

# ಆತಕೂರ ಶಾಸನ



ಆತಕೂರ ಶಾಸನ:

* ಇಂದು ಬೆಂಗಳೂರಿನ ವಸ್ತು ಸಂಗ್ರಹದಲ್ಲಿದೆ.

ಕಾಲ: ಕ್ರಿ.ಶ ೯೫೦

ಸ್ಥಳ: ಮಂಡ್ಯ ಜಿಲ್ಲೆಯ ಮಂಡ್ಯ ತಾಲೂಕಿನ ಆತಕೂರಿನ ಚಲ್ಲೇಶ್ವರ ದೇವಾಲಯ,

ಅರಸು ಮನೆತನ: ರಾಷ್ಟ್ರಕೂಟರ 3ನೇ ಕೃಷ್ಣ, ಬೂತುಗ ಮತ್ತು ಅವನ ಸೇವಕ

ಶಾಸನದ ವಿಷಯ: ಮನಾಲರ ಚೋಳ ರಾಜಾದಿತ್ಯನ ಮೇಲೆ ಯುದ್ಧ ಮಾಡಿದ ಮತ್ತು ರಾಜಾದಿತ್ಯನನ್ನು ಕೊಂದ ವಿಷಯವಾಗಿದೆ.

* ವೀರ ಮನಾಲರನಿಗೆ ವೀರ ಪ್ರಾಣಿ ಸಾಕುನಾಯಿಯು ಮೇಲಿದ್ದ ಪ್ರೀತಿಯನ್ನು ಪ್ರಾಮಾಣಿಕತೆಯಾಗಿ ತೋರುತ್ತದೆ. ಮೆಚ್ಚಿದ ತನ್ನ ದೊರೆಯನು ನಿನಗೇನು ಬೇಕು ಬೇಡಿಕೋ ಎಂದರೆ ಮನಾಲರ 'ಕಾಳಿ' ಎಂಬ ನಾಯಿ ಬೇಡಿ ಪಡೆಯುತ್ತಾನೆ. ಅಷ್ಟೇ ಅಲ್ಲ ಆ ನಾಯಿ ದೊಡ್ಡ ಹಂದಿಯೊಡನೆ ಕಾದಿ ಅದನ್ನು ಕೊಂದು ತಾನು ಸಾಯುತ್ತದೆ. ಆಗ ಮನಾಲರು ಅದಕ್ಕಾಗಿ ವೀರಗಲ್ಲು ನೆಟ್ಟು ಅದರ ಪೂಜೆಗಾಗಿ ಹೊಲವನ್ನು ಕೊಟ್ಟು ಅದನ್ನು ಕಿಗ್ಗಲ ಗ್ರಾಮದ ಆ ಕಲ್ಲು ಪೂಜಿಸುವ ಬಾಧ್ಯತೆ ಕೊಡಿದವರಿಗೆ [illegible]

# ಐಹೊಳೆ ಶಾಸನ



ಸ್ಥಳ :- ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಐಹೊಳೆ. ಗ್ರಾಮದ ಮೇಗುತಿ ಎಂಬ ದೇವಾಲಯದ ಪೂರ್ವ ದಿಕ್ಕಿನ ಗೋಡೆಯಲ್ಲಿ ಈ ಶಾಸನವಿದೆ.

ವಿಸ್ತರಣ :- ಸುಮಾರು ಐದು ಅಡಿ ಉದ್ದವಾಗಿಯೂ ಎರಡು ಕಾಲು ಅಡಿ [೨.೧/೪] ವಿಸ್ತಾರವಾಗಿಯೂ ಇರುವ ಈ ಶಾಸನ.

ಕಾಲ :- ಕ್ರಿ.ಶ ೬೩೪-೬೩೫.

ಭಾಷೆ :- ಸಂಸ್ಕೃತ. ಲಿಪಿ, ಹಳಗನ್ನಡ.

ಈ ಶಾಸನದ ಕವಿ ರವಿಕೀರ್ತಿಯು ತನ್ನನ್ನು ಕಾಳಿದಾಸ ಭಾರವಿಯರಿಗೆ ಸಮಾನನೆಂದು ಕರೆದುಕೊಂಡಿದ್ದಾರೆ.

# ಚಂದ್ರವಳ್ಳಿ ಶಾಸನ



ಚಂದ್ರವಳ್ಳಿ ಶಾಸನ :-

* ಕಾಲ :- ಕ್ರಿ.ಶ 4ನೇ ಶತಮಾನ
* ಸ್ಥಳ :- ಚಿತ್ರದುರ್ಗದ ಬಳಿಯ ಚಂದ್ರವಳ್ಳಿ ಶಾಸನ.
* ಭಾಷೆ :- ಪ್ರಾಕೃತ ಭಾಷೆ ಈ ಶಾಸನದ ಲಿಪಿ ಬ್ರಾಹ್ಮಿ.
* ಅರಸ ಮನೆತನ :- ಕದಂಬ ರಾಜ್ಯದ ಸ್ಥಾಪಕ ಮಯೂರವರ್ಮ.
* ಶಾಸನ ಬೆಳಕಿಗೆ ತಂದವರು :- ಡಾ. ಎಂ. ಹೆಚ್. ಕೃಷ್ಣರು.
* ಶಾಸನದ ವಿವರಣೆ :- ಮಯೂರ ವರ್ಮನು ಕೆರೆಯನ್ನು ಕಟ್ಟಿಸಿದ ವಿವರಣೆ ಇದರಲ್ಲಿದೆ. ಈ ಶಾಸನದ ಕೊನೆಯಲ್ಲಿ "ಕುಂತಳಾದೇಶ" ಎಂಬ ವ್ಯಕ್ತಿ ಸೂಚಿಸಲಾಗಿದೆ. * ಇಲ್ಲಿ ಕುಂತಳ ಎಂಬುವುದು ಪ್ರಾಚೀನ ಕಾಲದ ಕರ್ನಾಟಕದ ಪ್ರಸಿದ್ಧ ಪಟ್ಟಣವಾಗಿತ್ತು. ಇದು ಈಗಿನ ರಾಯಚೂರ ಜಿಲ್ಲೆಯ ಕೊಪ್ಪಳದ ಅಂತಿನ ಒಂದು ಹೆಸರು. ಕುಂತಳ, ಕೊಂತಳ ಎಂಬ ಹೆಸರಿನ ರೂಢಿ ಇದ್ದವು

# ಉಪಸಂಹಾರ

ಭಾರತೀಯ ಇತಿಹಾಸ ಸಂಸ್ಕೃತಿಗಳ ಅಧ್ಯಯನಕ್ಕೆ ಶಾಸನಗಳು ಒದಗಿಸುವ ಸಾಮಗ್ರಿಗಳು ಅತ್ಯಂತ ಮಹತ್ವ ಆಕರಗಳು ಇದುವರೆಗೆ ಸುಮಾರು ೨೮ ಸಾವಿರಕ್ಕಿಂತ ಹೆಚ್ಚು ಶಾಸನಗಳು ಕರ್ನಾಟಕದಲ್ಲಿ ದೊರೆತಿದ್ದು ಮುಂದಿನ ಸಾಹಿತ್ಯ ಶೋಧನೆಗೂ ಇಂಬು ನೀಡುವ ಭೂಮಿ ಬೆಳೆಯಲಿದೆ, ಸಾಂಸ್ಕೃತಿಕ ಪರಂಪರೆಗೆ ಇದು ಬುನಾದಿಯಾಗಿದೆ ಆಧುನಿಕತೆಯಲ್ಲಿ ಸಾವಿರಾರು ಪ್ರಾಚೀನತೆ. ಮರೆಯುವಂತಿಲ್ಲ. ಈ ದಿಸೆಯಲ್ಲಿ ಶಾಸನಗಳನ್ನು ಉಳಿಸಿ ರಕ್ಷಿಸುವುದು. ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಈ ರೀತಿ ಇತಿಹಾಸ ಹಾಗೂ ಸಾಹಿತ್ಯಕ್ಕೆ ಸ್ಫೂರ್ತಿ ನೀಡುವ ನಿಟ್ಟಿನಲ್ಲಿ ಹಲವಾರು ಶಾಸನಗಳು ಕರ್ನಾಟಕದಲ್ಲಿ ಬೆಳಕು ಬಂದಿವೆ. ಅವುಗಳಲ್ಲಿ ಈ ಶಾಸನಗಳು ಮಹತ್ವಪೂರ್ಣ ಶಾಸನವಾಗಿವೆ

# ಇತರ ಗ್ರಂಥಗಳು

| ಕ್ರ.ಸಂ. | ಪುಸ್ತಕದ ಹೆಸರು | ಲೇಖಕರು | ಪ್ರಕಾಶಕರು | ಪ್ರತಿ ಸಂಖ್ಯೆ |
|---|---|---|---|---|
| 1. | ಹಳಗನ್ನಡ ಸಾಹಿತ್ಯ ಚಂದ್ರಿಕೆ | ಡಾ. ಶಾಂತಾ ಶಾಂತಾ ಕೊಕನವರ ಕನ್ನಡ ಪ್ರಾಧ್ಯಾಪಕರು | ಅಯ್ಯ ಪುಸ್ತಕ ಪ್ರಕಾಶನ ಬೆಳಗಾವಿ | ೨೨೮,- ೨೮ಪ್ರ, |

Co-ordinator IQAC
G. P. Porwal Arts, Comm & V. V. Salimath
Science College, SINDGI-586128. Dt.Vijayapur

Principal,
G. P. Porwal Arts, Comm &
V. V. Salimath Sc. College
SINDGI-586128. College Code: 52